ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 7 ಜನವರಿ 2022
7 JANUARY 2022

ಕಲಬುರಗಿ
ಲೋಕಲ್ ಎಕ್ಸ್‌ಪ್ರೆಸ್

ಕಲಬುರಗಿ ಎಪಿಎಂಸಿ ಮಾರುಕಟ್ಟೆ ಧಾರಣೆ

ಹೆಸರು	ಕನಿಷ್ಠ	ಗರಿಷ್ಠ	ಹೆಸರು	ಕನಿಷ್ಠ	ಗರಿಷ್ಠ
ತೊಗರಿ	5309	6511	ಅಕ್ಕಿ ಚೂರು	2600	3200
ಕಡಲೆ	4850	4850	ಸೋಯಾಬಿನ್	5600	6061
ಹೆಸರು	3800	6800	ಸಜ್ಜೆ	1600	2050
ಉದ್ದು	3900	7300	ಬಿಳಿ ಎಳ್ಳು	7500	10000
ಜೋಳ	1800	3000	ಸೂರ್ಯಕಾಂತಿ	5000	5200
ಗೋಧಿ ಶರಬತಿ	1600	2100	ಕುಸುಬೆ	6150	6250
ಅಕ್ಕಿ ಸಣ್ಣ	4000	5600	ಬೆಲ್ಲ	2800	3500

ಲೈಂಗಿಕ ಸಮಸ್ಯೆ
"ನಿಮ್ಮ ಲೈಂಗಿಕ ಸಮಸ್ಯೆಗೆ ನಮ್ಮ ಇಂಡಿಯನ್ ಆಯುರ್ವೇದ" ಬಳಸಿದ ಕ್ಷಣವೇ ಕೆಲಸ ಆರಂಭ.
ನಮ್ಮ ನೂತನ ಚಿಕಿತ್ಸೆಯಿಂದ ಇಂದ್ರಿಯವನ್ನು 7-8 ಇಂಚು ಉದ್ದ, 3-4 ಇಂಚು ದಪ್ಪ, ನೇರ ಮತ್ತು ಗಟ್ಟಿಗೊಳಿಸಿ ಲೈಂಗಿಕ ಸಮಯವನ್ನು 30-40 ನಿಮಿಷ ಹೆಚ್ಚಿಸಿಕೊಳ್ಳಲು ತಕ್ಷಣ ಕರೆ ಮಾಡಿ.
21 ರಿಂದ 75 ವರ್ಷದವರೆಗೆ ರಾಮಬಾಣದಂತ ಔಷಧ, 100% ಗ್ಯಾರಂಟಿ, ಕಾಮಸೂತ್ರ ಪುಸ್ತಕಗಳು ದೊರೆಯುತ್ತವೆ
ಈಗ ಕರ್ನಾಟಕದಲ್ಲಿ ಲಭ್ಯವಿದೆ.
ಬೆಲೆ 1575, 2100, 3150, 5250
9740159227

ಮುಖ್ಯಗುರು ವಜಾಗೊಳಿಸಿ

ಶಹಾಪುರ: ಕಲಬುರಗಿ ತಾಲೂಕಿನ ನಿಜಾಮಪುರ ಸರ್ಕಾರಿ ಹಿರಿಯ ಉರ್ದು ಪ್ರಾಥಮಿಕ ಶಾಲೆಯ ಮುಖ್ಯಗುರು ಬಿಸಿಯೂಟದ ಸಿಬ್ಬಂದಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದು, ಕೂಡಲೇ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ರಿಚ್‌ಕೇರ್ ಹೋಮಿಯೋಪತಿ
ಸೋರಿಯಾಸಿಸ್ ಸಮಸ್ಯೆಯಿಂದ ಮುಕ್ತಿ ಬೇಕೆ..?
ಸೋರಿಯಾಸಿಸ್ ಲಕ್ಷಣಗಳು
ಚರ್ಮ ಕೆಂಪಾಗುವುದು, ತುರಿಕೆ, ಚರ್ಮ ಒಡೆದು ಹೋಗುವುದರಿಂದ ತೀವ್ರವಾದ ನೋವು.
ಸೋರಿಯಾಸಿಸ್ ತಲೆಯಲ್ಲಿದ್ದಾಗ ಹೊಟ್ಟು ಹಾಗೂ ಕೂದಲು ಉದುರುವಿಕೆ.
ಅಂಗೈ ಪಾದಗಳಲ್ಲಿನ ಚರ್ಮ ಹೊಟ್ಟಿನ ರೂಪದಲ್ಲಿ ಉದುರುವುದು.
ಸೋರಿಯಾಸಿಸ್ ರೋಗ ತೀವ್ರವಾಗಿದ್ದಾಗ ಕೀಲುಗಳಲ್ಲಿ ನೋವು ಕಾಣಿಸುತ್ತದೆ.
ಕಾರಣಗಳು : ಅನುವಂಶೀಯತೆ, ಮಾನಸಿಕ ಒತ್ತಡ ದೇಹದ ರೋಗ ನಿರೋಧಕ ವ್ಯವಸ್ಥೆಯಲ್ಲಿ ಅಸಮತೋಲನ
ಹಾಗಾದರೆ ಇಂದೇ ವೈದ್ಯರ ಸಲಹೆಗಾಗಿ ಕರೆಮಾಡಿ
74113 55955
ನಮ್ಮ ಶಾಖೆಗಳು : ಬೆಂಗಳೂರು ಮಲ್ಲೇಶ್ವರಂ, ಜಯನಗರ, ಮೈಸೂರು, ಹುಬ್ಬಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ (ವಿದ್ಯುತ್), ಮಹದೇವಪುರ ವಲಯ, ಹಳೆ ಮದ್ರಾಸ್ ರಸ್ತೆ, ಕೆ.ಆರ್ ಪುರ, ಬೆಂಗಳೂರು.

ಸಂಖ್ಯೆ: ಬೃಬೆಂಮಪಾ/ಕಾಪಾಅ/ವಿದ್ಯುತ್/ಮಪ/ಟೆಂಡರ್/03/2021-22 ದಿನಾಂಕ: 06.01.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಬಿ) (ಥ್ರಿಲಕೋಟೆ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಮಹದೇವಪುರ ವಿಭಾಗ, ಇವರು ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ, ಕೆಟಿಪಿಪಿ ಕಾಯಿದೆಗಳು 2000ಕ್ಕೆ ಅನುಗುಣವಾಗಿ ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ತತ್ಸಮಾನವಾಗಿ ಯಾವುದೇ ಕೇಂದ್ರ/ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ವಿದ್ಯುತ್ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಲಕ್ಷಗಳಲ್ಲಿ)
1	ವಾರ್ಡ್ ಸಂಖ್ಯೆ-54, 82, 85ರ ಹೂಡಿ, ದೊಡ್ಡನೆಕ್ಕುಂದಿ, ಗರುಡಾಚಾರ್‌ಪಾಳ್ಯದಲ್ಲಿ ಡಾರ್ಕ್ ಸ್ಪಾಟ್‌ಗಳಲ್ಲಿ ಬೀದಿ ದೀಪ ಒದಗಿಸುವುದು ಮತ್ತು ತಪ್ಪಿ ಹೋಗಿರುವ ಬೀದಿ ದೀಪಗಳನ್ನು ಅಳವಡಿಸುವುದು.	174	2.610
2	ವಾರ್ಡ್ ಸಂಖ್ಯೆ-83, 84ರ ಕಾಡುಗೋಡಿ, ಹಗದೂರಿನಲ್ಲಿ ಡಾರ್ಕ್ ಸ್ಪಾಟ್‌ಗಳಲ್ಲಿ ಬೀದಿ ದೀಪ ಒದಗಿಸುವುದು ಮತ್ತು ತಪ್ಪಿ ಹೋಗಿರುವ ಬೀದಿ ದೀಪಗಳನ್ನು ಅಳವಡಿಸುವುದು.	122	2.00
3	ವಾರ್ಡ್ ಸಂಖ್ಯೆ-149ರ ವರ್ತೂರಿನಲ್ಲಿ ಡಾರ್ಕ್ ಸ್ಪಾಟ್‌ಗಳಲ್ಲಿ ಬೀದಿ ದೀಪ ಒದಗಿಸುವುದು ಮತ್ತು ತಪ್ಪಿ ಹೋಗಿರುವ ಬೀದಿ ದೀಪಗಳನ್ನು ಅಳವಡಿಸುವುದು.	329	4.935
4	ವಾರ್ಡ್ ಸಂಖ್ಯೆ-86, 150ರ ಮಾರತ್ತಹಳ್ಳಿ, ಬೆಳ್ಳಂದೂರಿನಲ್ಲಿ ಡಾರ್ಕ್ ಸ್ಪಾಟ್‌ಗಳಲ್ಲಿ ಬೀದಿ ದೀಪ ಒದಗಿಸುವುದು ಮತ್ತು ತಪ್ಪಿ ಹೋಗಿರುವ ಬೀದಿ ದೀಪಗಳನ್ನು ಅಳವಡಿಸುವುದು.	109.5	2.00
5	ವಾರ್ಡ್ ಸಂಖ್ಯೆ-25ರ ವರ್ತೂರಿನಲ್ಲಿ ಡಾರ್ಕ್ ಸ್ಪಾಟ್‌ಗಳಲ್ಲಿ ಬೀದಿ ದೀಪ ಒದಗಿಸುವುದು ಮತ್ತು ತಪ್ಪಿ ಹೋಗಿರುವ ಬೀದಿ ದೀಪಗಳನ್ನು ಅಳವಡಿಸುವುದು.	199	2.985
6	ವಾರ್ಡ್ ಸಂಖ್ಯೆ-26ರ ವರ್ತೂರಿನಲ್ಲಿ ಡಾರ್ಕ್ ಸ್ಪಾಟ್‌ಗಳಲ್ಲಿ ಬೀದಿ ದೀಪ ಒದಗಿಸುವುದು ಮತ್ತು ತಪ್ಪಿ ಹೋಗಿರುವ ಬೀದಿ ದೀಪಗಳನ್ನು ಅಳವಡಿಸುವುದು.	199.5	2.993
7	ವಾರ್ಡ್ ಸಂಖ್ಯೆ-51, 52, 53ರ ವಿಜಿನಾಪುರ, ಕೆ.ಆರ್ ಪುರಂ, ಬಸವನಪುರದಲ್ಲಿ ಡಾರ್ಕ್ ಸ್ಪಾಟ್‌ಗಳಲ್ಲಿ ಬೀದಿ ದೀಪ ಒದಗಿಸುವುದು ಮತ್ತು ತಪ್ಪಿ ಹೋಗಿರುವ ಬೀದಿ ದೀಪಗಳನ್ನು ಅಳವಡಿಸುವುದು.	194	2.910
8	ವಾರ್ಡ್ ಸಂಖ್ಯೆ-55, 56, 81, 87ರ ದೇವಸಂದ್ರ, ಎ ನಾರಾಯಣಪುರ, ವಿಜ್ಞಾನನಗರ, ಹೆಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಡಾರ್ಕ್ ಸ್ಪಾಟ್‌ಗಳಲ್ಲಿ ಬೀದಿ ದೀಪ ಒದಗಿಸುವುದು ಮತ್ತು ತಪ್ಪಿ ಹೋಗಿರುವ ಬೀದಿ ದೀಪಗಳನ್ನು ಅಳವಡಿಸುವುದು.	173	2.595

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **07.01.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **14.01.2022**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **17.01.2022**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್‌ಗಳನ್ನು ದಿನಾಂಕ **20.01.2022**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆಯಬಹುದಾಗಿದೆ. ಸಹಿ/- ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಮಹದೇವಪುರ ವಲಯ

ಕೋವಿಡ್-19 - ಗಾಬರಿಯಾಗದಿರಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಎಲ್ಲ ಬಸವ ಪರ ಸಂಘಟನೆಯವರು ಭಾಗಿ

ಶರಣ ಮೇಳ 12ರಿಂದ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಬಸವ ಧರ್ಮ ಪೀಠದಿಂದ ಜ. 12 ರಿಂದ 14ರವರೆಗೆ ಕೂಡಲಸಂಗಮದಲ್ಲಿ 35ನೇ ಶರಣ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾ ರಾಜ್ಯ ಸಂಚಾಲಕ ರವೀಂದ್ರ ಶಾಬಾದಿ, ಜಿಲ್ಲಾಧ್ಯಕ್ಷ ಪ್ರಭುಲಿಂಗ ಮಹಾಗಾಂವಕರ್, ಕಾರ್ಯದರ್ಶಿ ಆರ್.ಜಿ.ಶೆಟಗಾರ ತಿಳಿಸಿದರು.

ಎಲ್ಲ ಬಸವ ಭಕ್ತರು ಒಗ್ಗೂಡಿದ್ದರಿಂದ ಈ ಸಲದಿಂದ ಜಾಗತಿಕ ಲಿಂಗಾಯತ ಮಹಾಸಭಾ ನೇತೃತ್ವದಲ್ಲಿ ಶರಣ ಮೇಳ ನಡೆಯುತ್ತಿದೆ. ಜಿಲ್ಲೆಯ ಎಲ್ಲ ಬಸವ ಪರ ಸಂಘಟನೆಯವರು ಭಾಗವಹಿಸುತ್ತಿದ್ದಾರೆ ಎಂದು ಗುರುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಮೇಳಕ್ಕೆ ತೆಲಂಗಾಣ, ಮಹಾರಾಷ್ಟ್ರ, ತಮಿಳುನಾಡು ಸೇರಿ ವಿವಿಧೆಡೆಯಿಂದ ಅಪಾರ ಬಸವಭಕ್ತರು ಆಗಮಿಸುತ್ತಿದ್ದಾರೆ. 12ರಂದು ರಾಷ್ಟ್ರೀಯ ಬಸವ ದಳದ ಅಧಿವೇಶನವಿದೆ. 13ರಂದು ಸಿಎಂ ಬಸವರಾಜ ಬೊಮ್ಮಾಯಿ ಮೇಳವನ್ನು ಉದ್ಘಾಟಿಸಲಿದ್ದಾರೆ. ಮೂರು ದಿನ ಅರ್ಥಪೂರ್ಣ ಕಾರ್ಯಕ್ರಮ ನಡೆಯಲಿವೆ ಎಂದರು.

ಲಿಂಗಾಯತ ಧರ್ಮ ಸಂಘಟನೆ ಹಿತದೃಷ್ಟಿಯಿಂದ ಮತ್ತು ನ್ಯಾಯಾಲಯದ ಆದೇಶದಂತೆ ಲಿಂಗದೇವ ಎಂಬ ಅಂಕಿತವನ್ನು ಮಾತೆ ಗಂಗಾದೇವಿ ಅವರು ಹಿಂಪಡೆದು ಕೂಡಲಸಂಗಮದೇವ ಎಂದು ಬಳಸಲು ಆದೇಶಿಸಿದ್ದಾರೆ. ಹೀಗಾಗಿ ಲಿಂಗಾಯತರಿಗೆ ಬಲ ಬಂದಿದೆ. ಲಿಂಗಾಯತ ಸ್ವತಂತ್ರ ಧರ್ಮ ಹೋರಾಟದ ಶಕ್ತಿ ಹೆಚ್ಚಾಗಿದೆ. ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ಹೈದ್ರಾಬಾದ್‌ನಲ್ಲಿ ಲಿಂಗಾಯತ ಪ್ರತ್ಯೇಕ ಧರ್ಮಕ್ಕಾಗಿ ಒತ್ತಾಯಿಸಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಲಿಂಗಾಯತ ಸ್ವತಂತ್ರ ಧರ್ಮ ನಮ್ಮ ಗುರಿ. ನಮ್ಮೊಂದಿಗೆ ಯಾರೇ ಬಂದರೂ ತೆಗೆದುಕೊಂಡು ಹೋಗುತ್ತೇವೆ. ಬಸವ ತತ್ತ್ವ ಒಪ್ಪುವ ಎಲ್ಲರೂ ನಮ್ಮೊಂದಿಗೆ ಬರಬಹುದು. ಲಿಂಗಾಯತದಲ್ಲಿ 102 ಜಾತಿ, ಉಪ ಜಾತಿಗಳಿವೆ. ವೀರಶೈವ ಎನ್ನುವುದು ಒಂದು ಉಪ ಪಂಗಡ. ಈ ಕುರಿತು ಸರ್ಕಾರದ ಆದೇಶಗಳಿವೆ. ನಾವು ಯಾರನ್ನೂ ವಿರೋಧಿಸುತ್ತಿಲ್ಲ, ವಿರೋಧಿಸುವುದೂ ಇಲ್ಲ. ನಮ್ಮ ಹೋರಾಟ ನಿರಂತರ ನಡೆಯಲಿದೆ ಎಂದರು. ಪ್ರಮುಖರಾದ ವಿಶ್ವನಾಥ ಡೋಣೂರ, ಜಗನ್ನಾಥ ಪನಸಾಲೆ, ಬಸವರಾಜ ಡೋಣಗಾಂವ, ಅಶೋಕ ಘೂಳಿ, ಬಸವರಾಜ ಮೊರಬದ, ಶಿವಕುಮಾರ ಬಿದರಿ, ಮಹಾಂತೇಶ ಕೊಣ್ಣೂರ, ಜಗನ್ನಾಥ ಉಡುಪಿ ಇದ್ದರು.

ಬೀದಿ ನಾಯಿ ಕಚ್ಚಿ 4 ಮಕ್ಕಳಿಗೆ ಗಾಯ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಬೀದಿ ನಾಯಿ ದಾಳಿಯಿಂದ ಗಾಯಗೊಂಡ ಮಕ್ಕಳನ್ನು ಜಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಬಂದಿರುವುದು.

ನಗರದಲ್ಲಿ ತಾಜನಗರದಲ್ಲಿ ಬೀದಿ ನಾಯಿಗಳು ಕಚ್ಚಿದ್ದರಿಂದ ನಾಲ್ಕು ಮಕ್ಕಳು ಗಾಯಗೊಂಡ ಘಟನೆ ಗುರುವಾರ ಮಧ್ಯಾಹ್ನ ನಡೆದಿದೆ. ವಾರ್ಡ್ 1ರ ವ್ಯಾಪ್ತಿಯ ಇಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಮನೆ ಮುಂದೆ ಮಕ್ಕಳು ಆಟವಾಡುತ್ತಿದ್ದಾಗ ದಾಳಿ ಮಾಡಿವೆ. ದಾಳಿ ವೇಳೆ ಹಿರಿಯರು ನಾಯಿಗಳನ್ನು ಓಡಿಸಲು ಯತ್ನಿಸಿದ್ದಾರೆ. ಆದರೆ ಅವರನ್ನು ಸಹ ಬೆನ್ನಟ್ಟಿವೆ. ಮೂರು ಮಕ್ಕಳಿಗೆ ಹೆಚ್ಚು, ಇನ್ನೊಂದು ಮಗುವಿಗೆ ಸ್ವಲ್ಪ ಕಚ್ಚಿದ ಗಾಯವಾಗಿದೆ. ಇವರಿಗೆ ಚಿಕಿತ್ಸೆಗಾಗಿ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೀದಿ ನಾಯಿ ಉಪಟಳಕ್ಕೆ ಕಡಿವಾಣ ಹಾಕುವಂತೆ ಹಲವು ಬಾರಿ ಮನವಿ ಮಾಡಿದರೂ ಪಾಲಿಕೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.22, 17ನೇ 'ಎಫ್' ಅಡ್ಡ ರಸ್ತೆ, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು-38
ಸಂ. ಕೆಯುಐಡಿಎಫ್‌ಸಿ/ಕೆಯುಡಬ್ಲ್ಯುಎಸ್‌ಎಮ್‌ಪಿ/1685/2021-22 ದಿ: 06.01.2022

ತಿದ್ದುಪಡಿ

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದಿಂದ ದಿನಾಂಕ 14.12.2021 ಹಾಗೂ 20.12.2021 ರಂದು ನೀಡಲಾಗಿರುವ ಪತ್ರಿಕಾ ಪ್ರಕಟಣೆ ಸಂಖ್ಯೆ ಕೆಯುಐಡಿಎಫ್‌ಸಿ/ಕನ್ಸ್‌ಲ್ಟೆಂಟ್/ನೇ.ಪ್ರ/1685/2021-22 ಕ್ಕೆ ಸಂಬಂಧಿಸಿದಂತೆ, ಕನ್ಸ್‌ಲ್ಟೆಂಟ್ ಯೋಜನೆಯಲ್ಲಿ **ಟೀಂ ಅಧೀಕ್ಷಕರು ಹಾಗೂ ಟೀಂ ಸಹಾಯಕರ ಹುದ್ದೆಗೆ ನಿಗದಿಪಡಿಸಲಾದ ಗರಿಷ್ಠ ವಯೋಮಿತಿಯನ್ನು 55 ಕ್ಕೆ** ನಿಗದಿಪಡಿಸಲಾಗಿದೆ ಹಾಗೂ ಈ ಎರಡು ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **13.01.2022 ಸಂಜೆ 5.00 ರವರೆಗೆ** ವಿಸ್ತರಿಸಲಾಗಿದೆ. ನೇಮಕಾತಿ ಪ್ರಕಟಣೆಯ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಟ್ಸಿ ಕೋಡ್, 2016 ರಡಿಯಲ್ಲಿ ಇ ಹರಾಜು ಮಾರಾಟದ ನೋಟಿಸ್
ಕೆಎಸ್‌ಎಸ್ ಪೆಟ್ರೋನ್ ಪ್ರೈವೇಟ್ ಲಿಮಿಟೆಡ್ (ಇನ್ ಲಿಕ್ವಿಡೇಷನ್)
CIN: U45400MH2007PTC234297
ನೋಂದಾಯಿತ ಕಚೇರಿ: [illegible] 400071
ಹರಾಜಿನ ದಿನಾಂಕ ಮತ್ತು ಸಮಯ: 28.01.2022 ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 02:00 ಗಂಟೆಯವರೆಗೆ
(ಪ್ರತಿ 5 ನಿಮಿಷಗಳ ಅಮಿತಮಿತ ವಿಸ್ತರಣೆಯೊಂದಿಗೆ)

[illegible] https://ncltauction.auctiontiger.net [illegible]

[illegible]	[illegible] (ರೂ. ಗಳಲ್ಲಿ)	[illegible] (ರೂ. ಗಳಲ್ಲಿ)	[illegible] (ರೂ. ಗಳಲ್ಲಿ)
[illegible] https://ksspetron.in/liquidation.html [illegible]	56,28,450/-	5,62,845/- ಅವಧಿ: 07.01.2022 ರಿಂದ 15.01.2022	20,000/-

[illegible] http://petroengineering.com/liquidation-process/liquidation-process [illegible]

ಕೆಎಸ್‌ಎಸ್ ಪೆಟ್ರೋನ್ ಪ್ರೈವೇಟ್ ಲಿಮಿಟೆಡ್ (ಇನ್ ಲಿಕ್ವಿಡೇಷನ್) ಪರವಾಗಿ
ಸಹಿ/-
ವಿನೀತ್ ಚೌಧರಿ
ಲಿಕ್ವಿಡೇಟರ್
ನೋಂದಣಿ ಸಂ.: IBBI/IPA-002/IP-N00103/2017-18/10246
liquidatorksspetron@vkcindia.com
ip.vineetchaudhary@gmail.com
ಡಿ-38, [illegible] -110049
ದಿನಾಂಕ: 07.01.2022
ಸ್ಥಳ: ನವ ದೆಹಲಿ

ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಟ್ಸಿ ಕೋಡ್, 2016 ರಡಿಯಲ್ಲಿ ಇ ಹರಾಜು ಮಾರಾಟದ ನೋಟಿಸ್
[illegible]
(ಇನ್ ಲಿಕ್ವಿಡೇಷನ್)
CIN: L45202MH1976PLC019135
[illegible] 400071
ಹರಾಜಿನ ದಿನಾಂಕ ಮತ್ತು ಸಮಯ: 28.01.2022 ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 02:00 ಗಂಟೆಯವರೆಗೆ
[illegible]

[illegible] https://ncltauction.auctiontiger.net [illegible]

[illegible]	[illegible] (ರೂ. ಗಳಲ್ಲಿ)	[illegible] (ರೂ. ಗಳಲ್ಲಿ)	[illegible] (ರೂ. ಗಳಲ್ಲಿ)
[illegible]	4,72,476/-	47,250/- ಅವಧಿ: 07.01.2022 ರಿಂದ 15.01.2022	20,000/-

[illegible]

ಲಿಕ್ವಿಡೇಟರ್
ನೋಂದಣಿ ಸಂ.: IBBI/IPA-002/IP-N00103/2017-18/10246
liquidatorpetro@vkcindia.com
ip.vineetchaudhary@gmail.com
ಡಿ-38, [illegible] -110049
ದಿನಾಂಕ: 07.01.2022

ವಾರಾಂತ್ಯ ಕರ್ಫ್ಯೂ ನಾಳೆ, ನಾಡಿದ್ದು | ಸೋಮವಾರ ಬೆಳಗ್ಗೆ 5ಕ್ಕೆ ಅಂತ್ಯ

ಸಂಜೆ 8ರಿಂದ ಜಿಲ್ಲೆ ಸ್ತಬ್ಧ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಕರೊನಾ 3ನೇ ಅಲೆ ನಿಯಂತ್ರಣ, ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಶುಕ್ರವಾರ ಸಂಜೆ 8ರಿಂದ ಸೋಮವಾರ ಬೆಳಗ್ಗೆ 5ರವರೆಗೆ ಜಿಲ್ಲಾದ್ಯಂತ ವೀಕೆಂಡ್ ಕರ್ಫ್ಯೂ ಇರಲಿದೆ. ಉಳಿದ ದಿನಗಳಲ್ಲಿ ರಾತ್ರಿ 10ರಿಂದ ಬೆಳಗ್ಗೆ 5ರವರೆಗೆ ಕರ್ಫ್ಯೂ ಮುಂದುವರಿಯಲಿದೆ ಎಂದು ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ ತಿಳಿಸಿದ್ದಾರೆ.

ಒಮಿಕ್ರಾನ್ ಭೀತಿ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಹಲವು ಕ್ರಮ ಕೈಗೊಂಡಿದೆ. ವಾರಾಂತ್ಯ ಲಾಕ್‌ಡೌನ್ ವೇಳೆ ದಿನಸಿ, ಹಾಲು, ಮೆಡಿಕಲ್, ತರಕಾರಿ, ಮಾಂಸ, ಹಣ್ಣು, ಮೇವು ವ್ಯವಹಾರ ಎಂದಿನಂತಿರಲಿದೆ. ಅನಗತ್ಯ ಸಂಚಾರಕ್ಕೆ ನಿರ್ಬಂಧವಿದ್ದು, ಸರ್ಕಾರಿ ಕಚೇರಿ, ತುರ್ತು ಸೇವೆಗೆ ಹೋಗಬಹುದು. ಖಾಸಗಿ ನೌಕರರು ಕಂಪನಿ ಗುರುತಿನ ಚೀಟಿಯೊಂದಿಗೆ ಕೆಲಸಕ್ಕೆ ಹಾಜರಾಗಬಹುದು. ರೆಸ್ಟೋರೆಂಟ್, ಹೋಟೆಲ್‌ಗಳಲ್ಲಿ ಪಾರ್ಸಲ್‌ಗೆ ಅವಕಾಶವಿದೆ.

ಎಲ್ಲ ಸರ್ಕಾರಿ ಕಚೇರಿಗಳು ಐದು ದಿನ ಕೆಲಸ ನಿರ್ವಹಿಸಲಿವೆ. ಪಬ್, ಬಾರ್, ಹೋಟೆಲ್‌ಗಳಲ್ಲಿ ಶೇ.50 ಸ್ಥಾನ, ಲಸಿಕೆ ಪಡೆಯದವರಿಗೆ ಪ್ರವೇಶ ನಿಷೇಧ, ಥಿಯೇಟರ್‌ಗಳಲ್ಲಿ ಶೇ.50 ಭರ್ತಿಗೆ ಅವಕಾಶವಿದೆ. ಒಳಾಂಗಣದಲ್ಲಿ 100, ಹೊರಾಂಗಣದಲ್ಲಿ 200ಕ್ಕಿಂತ ಹೆಚ್ಚು ಜನ ಒಳಗೊಂಡಂತೆ ಕಾರ್ಯಕ್ರಮ ನಡೆಸಬಹುದು, ದೇವಸ್ಥಾನಗಳಲ್ಲಿ ದರ್ಶನಕ್ಕೆ ಮಾತ್ರ ಅವಕಾಶವಿದೆ. ಧರಣಿ, ಪ್ರತಿಭಟನೆಗೆ ಅವಕಾಶವಿಲ್ಲ ಎಂದು ತಿಳಿಸಿದ್ದಾರೆ.

ಪ್ರಾಯೋಗಿಕ ಪರೀಕ್ಷೆ ದಿನ ಬದಲು

ವೀಕೆಂಡ್ ಕರ್ಫ್ಯೂ ಹಿನ್ನೆಲೆಯಲ್ಲಿ ಶನಿವಾರ, ಭಾನುವಾರ ಹಮ್ಮಿಕೊಂಡ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಸೀನಿಯರ್, ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ದರ್ಜೆ ಪ್ರಾಯೋಗಿಕ ಪರೀಕ್ಷೆ ದಿನಾಂಕ ಬದಲಾಯಿಸಲಾಗಿದೆ ಎಂದು ಕಮಲಾಪುರ ಡಯಟ್ ಪ್ರಾಚಾರ್ಯ ತಿಳಿಸಿದ್ದಾರೆ. ಸೀನಿಯರ್ ದರ್ಜೆ ಪರೀಕ್ಷೆ 11ರಿಂದ 13, ವಿದ್ವತ್ ಪೂರ್ವ ಮತ್ತು ವಿದ್ವತ್ ಅಂತಿಮ ದರ್ಜೆ ಪರೀಕ್ಷೆ 17ರಿಂದ 19, ಬೆಳಗಾವಿ ಮತ್ತು ಮೈಸೂರು ವಿಭಾಗಗಳಲ್ಲಿ ನಿಗದಿಪಡಿಸಿದ್ದ ವಿದ್ವತ್ ಪೂರ್ವ ಮತ್ತು ಅಂತಿಮ ಪರೀಕ್ಷೆ 27ರಿಂದ 29ರವರೆಗೆ ನಡೆಯಲಿದೆ. ವಿದ್ಯಾರ್ಥಿಗಳು ಈ ಬದಲಾವಣೆ ಗಮನಿಸುವುದು.

ಕರೊನಾ ನಿಯಂತ್ರಣ ನಿಮಿತ್ತ ಕಲಬುರಗಿಯಲ್ಲಿ ಸಂಸದ ಡಾ.ಉಮೇಶ ಜಾಧವ್ ಗುರುವಾರ ಅಧಿಕಾರಿಗಳ ಸಭೆ ನಡೆಸಿದರು. ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ, ಜಿಪಂ ಸಿಇಒ ಡಾ.ದಿಲೀಷ್ ಶಶಿ, ಎಸ್‌ಪಿ ಇಶಾ ಪಂತ್, ಡಿಸಿಪಿ ಅಡ್ಡೂರು ಶ್ರೀನಿವಾಸಲು, ಪಾಲಿಕೆ ಆಯುಕ್ತ ಸ್ನೇಹಲ್ ಲೋಖಂಡೆ, ಎಸಿ ಮೋನಾ ರೋತ್, ಬಿ.ಅಶ್ವಿಜಾ ಇತರರಿದ್ದರು.

ಮೂರನೇ ಅಲೆ ತಡೆಗೆ ಮುನ್ನೆಚ್ಚರಿಕೆ ವಹಿಸಿ

ಕಲಬುರಗಿ: ರಾಜ್ಯಾದ್ಯಂತ ಕರೊನಾ ತೀವ್ರವಾಗಿ ಹರಡುತ್ತಿದ್ದು, ನಿಯಂತ್ರಣಕ್ಕೆ ಜಿಲ್ಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸಂಸದ ಡಾ.ಉಮೇಶ ಜಾಧವ್ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಡಿಸಿ ಕಚೇರಿಯಲ್ಲಿ ಗುರುವಾರ ಅಧಿಕಾರಿಗಳ ಸಭೆ ನಡೆಸಿದ ಅವರು, ಆಕ್ಸಿಜನ್ ಪ್ಲಾಂಟ್ ಸರಿಯಾಗಿ ಬಳಕೆಯಾಗಬೇಕು. ಬೆಡ್ ಮೀಸಲಿಟ್ಟು, ಲಸಿಕೆ ತೀವ್ರಗೊಳಿಸಬೇಕು ಎಂದರು.

ಡಿಸಿ ವಿ.ವಿ. ಜ್ಯೋತ್ಸ್ನಾ ಮಾತನಾಡಿ, ಕರೊನಾ ತಡೆಗೆ ಜಿಮ್ಸ್, ಇಎಸ್‌ಐಸಿ ಹಾಗೂ ತಾಲೂಕು ಆಸ್ಪತ್ರೆ ಒಳಗೊಂಡಂತೆ ಬೆಡ್, ಆಕ್ಸಿಜನ್, ಔಷಧ ಅಭಾವ ಆಗದಂತೆ ನೋಡಿಕೊಳ್ಳಬೇಕು. ಆಸ್ಪತ್ರೆಗಳಲ್ಲಿ ಸಣ್ಣಪುಟ್ಟ ದುರಸ್ತಿ ಸರಿಪಡಿಸಿಕೊಳ್ಳಬೇಕು ಎಂದು ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು.

ಸರ್ಕಾರಿ ಕಚೇರಿ ಸಿಬ್ಬಂದಿ ಎರಡು ಡೋಸ್ ಲಸಿಕೆ ಕಡ್ಡಾಯ. ಅಫಜಲಪುರ, ಆಳಂದ, ಚಿಂಚೋಳಿ ಹಾಗೂ ಸೇಡಂ ಚೆಕ್ ಪೋಸ್ಟ್‌ಗಳಲ್ಲಿ ಕಟ್ಟೆಚ್ಚರ ವಹಿಸಬೇಕು. ಸಕ್ಕರೆ, ಸಿಮೆಂಟ್ ಕಾರ್ಖಾನೆಗಳಲ್ಲಿ ಬೇರೆ ರಾಜ್ಯದ ವಾಹನ ಚಾಲಕರು ಬರುತ್ತಿದ್ದು, ನಿತ್ಯ ತಪಾಸಣೆ ಮಾಡಬೇಕು. ಗ್ರಾಮಗಳಲ್ಲಿ ಕೋವಿಡ್ ಜಾಗೃತಿಗೆ ತಾಲೂಕು ಮಟ್ಟದಲ್ಲಿ ತಲಾ 30 ಶಿಕ್ಷಕರು, ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುವಂತೆ ಸಲಹೆ ನೀಡಿದರು. ಜಿಪಂ ಸಿಇಒ ಡಾ.ದಿಲೀಷ್ ಶಶಿ ಮಾತನಾಡಿದರು. ಎಸ್‌ಪಿ ಇಶಾ ಪಂತ್, ಡಿಸಿಪಿ ಅಡ್ಡೂರು ಶ್ರೀನಿವಾಸಲು, ಪಾಲಿಕೆ ಆಯುಕ್ತ ಸ್ನೇಹಲ್ ಲೋಖಂಡೆ, ಸಹಾಯಕ ಆಯುಕ್ತರಾದ ಮೋನಾ ರೋತ್, ಬಿ.ಅಶ್ವಿಜಾ, ಡಿಎಚ್‌ಒ ಡಾ.ಶರಣಬಸಪ್ಪ ಗಣಜಲಖೇಡ, ಜಿಮ್ಸ್ ನಿರ್ದೇಶಕಿ ಡಾ.ಕವಿತಾ ಪಾಟೀಲ್, ಜಿಲ್ಲಾ ಶಸ್ತ್ರಜ್ಞ ಡಾ.ಅಂಬಾರಾಯ ರುದ್ರವಾಡಿ, ಆರ್‌ಸಿಹೆಚ್ ಡಾ.ಪ್ರಭುಲಿಂಗ ಮಾನಕರ್, ಪ್ರಮುಖರಾದ ಶಿವಶರಣಪ್ಪ ಮೂಳೆಗಾಂವ, ರಮೇಶ ಸಂಗಾ, ಶಿವಶರಣಪ್ಪ, ಎಂ.ಅಲ್ಲಾಭಕ್ಷ ಇತರರಿದ್ದರು.

ಲಸಿಕೆ ನೀಡಲು ವಾರದ ಗಡುವು

ಜಿಲ್ಲೆಯ ಶಾಲಾ-ಕಾಲೇಜು ಹಾಗೂ ವಸತಿನಿಲಯ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಕೋವಿಡ್ ಲಸಿಕೆ ಹಾಕಿಸಬೇಕು ಮತ್ತು ಒಂದು ವಾರದೊಳಗೆ ಇದನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಜ್ಯೋತ್ಸ್ನಾ ಗಡುವು ನೀಡಿದರು.

25 ಜನರಿಗೆ ಪಾಸಿಟಿವ್

ಕಲಬುರಗಿ: ಜಿಲ್ಲೆಯಲ್ಲಿ ಗುರುವಾರ 25 ಜನರಿಗೆ ಕರೊನಾ ಪಾಸಿಟಿವ್ ಬಂದಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 111ಕ್ಕೆ ಏರಿದೆ.

ಕೊಲನಪಾಕದಲ್ಲಿ ಏರ್ಪಡಿಸಿದ್ದ ಧರ್ಮ ಜಾಗೃತಿ ಸಮಾರಂಭದಲ್ಲಿ ರಂಭಾಪುರಿ ಶ್ರೀಗಳ ವಿಜಯವಾಣಿಯ ಅಂತರಂಗ ಲೇಖನಗಳ ಸಂಗ್ರಹ ಕೃತಿಯನ್ನು ರಂಭಾಪುರಿ ಶ್ರೀ ಡಾ.ವೀರಸೋಮೇಶ್ವರ ಜಗದ್ಗುರುಗಳು ಬಿಡುಗಡೆ ಮಾಡಿದರು. ಶ್ರೀ ಸೋಮಲಿಂಗ ಶಿವಾಚಾರ್ಯರು, ಶ್ರೀ ರಾಜೇಶ್ವರ ಶಿವಾಚಾರ್ಯರು ಇತರರಿದ್ದರು.

ಧರ್ಮದಿಂದ ವಿಮುಖರಾದರೆ ಆಪತ್ತು

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಸಮಾಜದಲ್ಲಿ ನೀತಿ, ಸತ್ಯ, ಸ್ನೇಹ, ವಿನಯ ನ್ಯಾಯ ಮಾರ್ಗಗಳು ಕಣ್ಮರೆಯಾಗಿ ಸ್ವಾರ್ಥ ಸಂಘರ್ಷ ಬೆಳೆಯುತ್ತಿರುವುದು ಒಳ್ಳೆಯದಲ್ಲ. ಧರ್ಮ ಮಾರ್ಗದಿಂದ ವಿಮುಖರಾದರೆ ಆಪತ್ತು ತಪ್ಪಿದ್ದಲ್ಲ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರು ಹೇಳಿದರು.

ತೆಲಂಗಾಣದ ಕೊಲನಪಾಕ ಸ್ವಯಂಭು ಶ್ರೀ ಸೋಮೇಶ್ವರ ಕ್ಷೇತ್ರದಲ್ಲಿ ಜನ್ಮ ದಿನೋತ್ಸವ ನಿಮಿತ್ತ ಗುರುವಾರ ಏರ್ಪಡಿಸಿದ್ದ ಧರ್ಮ ಜಾಗೃತಿ ಸಮಾರಂಭದಲ್ಲಿ ಆಶೀರ್ವಚನ ನೀಡಿ, ಸತ್ತ ಮೇಲೂ ಹೆಸರು ಉಳಿಯುವಂಥ ಕಾರ್ಯ ಮಾಡಬೇಕು. ಹುಟ್ಟು ಸಾವಿನ ಮಧ್ಯೆ ಬದುಕು ರೂಪಿಸಿಕೊಳ್ಳುವ ಜವಾಬ್ದಾರಿ ಅವರವರದ್ದು. ಸಮೃದ್ಧ ಬದುಕಿಗೆ ಸಂಸ್ಕಾರ ಅವಶ್ಯ. ಕಲ್ಲು, ಮುಳ್ಳುಗಳಿಂದ ತುಂಬಿದ ಜೀವನದಲ್ಲಿ ಹೂ ಗಿಡ ನೆಟ್ಟು ಸುಗಂಧ ಬೀರುವಂತೆ ಮಾಡುವದೇ ಸತ್ಪುರುಷರ ಗುರಿ ಎಂದರು.

ಬಿಚಗುಂದ ಮಠದ ಶ್ರೀ ಸೋಮಲಿಂಗ ಶಿವಾಚಾರ್ಯರು, ಮೇಹಕರದ ಶ್ರೀ ರಾಜೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು. ಮಳಲಿಮಠ, ದೊಡ್ಡಗುಣಿ, ಸಂಗೊಳ್ಳಿ, ಜವಳಿ, ರಾಜೇಶ್ವರ, ಹುಡುಗಿ, ಆಚಲೇರಿ, ಉದಗೀರ, ದೋರನಹಳ್ಳಿ, ಶಿರಿಸ್ನಾಡ, ಸಿಂಧನೂರು ಶ್ರೀಗಳು, ಗಿರಿಯಪ್ಪ ಮುತ್ಯಾ ಉಪಸ್ಥಿತರಿದ್ದರು.

ಕಲಬುರಗಿಯ ಅನಂತಪ್ಪ ಹುಂಪಳಿ ಸಂಗ್ರಹಿಸಿದ ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾದ ರಂಭಾಪುರಿ ಜಗದ್ಗುರುಗಳ ಲೇಖನಗಳ ಕೃತಿ ಮತ್ತು ಬೆಂಗಳೂರಿನ ಬಾಳಯ್ಯ ಹೊರ ತಂದ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು.

ಅರ್ಚಕ ಸೋಮಯ್ಯಸ್ವಾಮಿ ಮತ್ತು ಗಂಗಾಧರಸ್ವಾಮಿ ಅವರಿಂದ ದೀಪಾರತಿ ನೆರವೇರಿತು. ಶ್ರೀಪೀಠದ ಗಂಗಾಧರಸ್ವಾಮಿ ಮತ್ತು ಗದಿಗೆಯ್ಯಸ್ವಾಮಿ ಅವರಿಂದ ವೇದ ಪಠಣ ನಡೆಯಿತು. ಕಲಬುರಗಿಯ ಶ್ರೀಜಗದ್ಗುರು ರೇಣುಕಾಚಾರ್ಯ ಭಜನಾ ಮಂಡಳಿ ಮತ್ತು ಮಹಾರಾಷ್ಟ್ರದ ಮಹಿಳಾ ಮಂಡಳಿಯಿಂದ ಗೀತ ಗಾಯನ ಜರುಗಿತು. ಟ್ರಸ್ಟ್ ಕಾರ್ಯದರ್ಶಿ ಅಣ್ಣಾರಾವ ಬಿರಾದಾರ ಸ್ವಾಗತಿಸಿದರು. ಸಿದ್ಧರಬೆಟ್ಟದ ಶ್ರೀವೀರಭದ್ರ ಶಿವಾಚಾರ್ಯರು ನಿರೂಪಣೆ ಮಾಡಿದರು.

> **ಜಾತಿ ಜಂಜಾಟ ಮೀರಿ ಹೃದಯವೈಶಾಲ್ಯತೆಯ ತಳಹದಿ ಮೇಲೆ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಕೊಟ್ಟ ಕೊಡುಗೆ ಅಪಾರ. ಜಾತಿಗಿಂತ ನೀತಿ, ತತ್ವಕ್ಕಿಂತ ಆಚರಣೆ, ಮಾತಿಗಿಂತ ಕೃತಿ, ಬೋಧನೆಗಿಂತ ಸಾಧನೆ, ದಾನಕ್ಕಿಂತ ದಾಸೋಹ, ಚರಿತ್ರೆಗಿಂತ ಚಾರಿತ್ರ್ಯ ದೊಡ್ಡದೆಂದು ಬೋಧಿಸಿದ್ದಾರೆ. ಈ ತತ್ವ ಸಾರ್ವಕಾಲಿಕ ಸತ್ಯವಾಗಿವೆ.**
>
> । ಶ್ರೀ ರಂಭಾಪುರಿ ಜಗದ್ಗುರು

ದಿಗ್ವಿಜಯ 24X7 NEWS
DIGHVIJAY
ಕನ್ನಡಿಗರ ಧ್ವನಿ

ಇಂದಿನ ಕಾರ್ಯಕ್ರಮಗಳು

ಶುಭೋದಯ ಕರ್ನಾಟಕ	: ಬೆಳಗ್ಗೆ 5.57 ಕ್ಕೆ
ಸಂಸ್ಕೃತಿ	: ಬೆಳಗ್ಗೆ 6.15 ಕ್ಕೆ
ನೇಗಿಲಯೋಗಿ	: ಬೆಳಗ್ಗೆ 6.27 ಕ್ಕೆ
ನಮಸ್ತೆ ಕರ್ನಾಟಕ	: ಬೆಳಗ್ಗೆ 6.57 ಕ್ಕೆ ಮತ್ತು ಸಂಜೆ 5.57 ಕ್ಕೆ
30 ನಿಮಿಷ, 60 ಸುದ್ದಿ	: ಬೆಳಗ್ಗೆ 7.27 ಕ್ಕೆ
ಸ್ಪೋರ್ಟ್ಸ್ ಕ್ಲಬ್	: ಬೆಳಗ್ಗೆ 7.57 ಕ್ಕೆ
ಬ್ರೇಕಿಂಗ್ ಬುಲೆಟಿನ್	: ಬೆಳಗ್ಗೆ 8.27 ಕ್ಕೆ
ದಿಗ್ವಿಜಯ ಎಕ್ಸ್‌ಕ್ಲೂಸಿವ್	: ಬೆಳಗ್ಗೆ 9.57 ಕ್ಕೆ
ದಿಗ್ವಿಜಯ ನ್ಯೂಸ್ (LIVE)	: ಬೆಳಗ್ಗೆ 10.57 ಕ್ಕೆ
ದಿಗ್ವಿಜಯ ನ್ಯೂಸ್ (LIVE)	: ಬೆಳಗ್ಗೆ 11.57 ಕ್ಕೆ
MID DAY NEWS	: ಮಧ್ಯಾಹ್ನ 12.57 ಕ್ಕೆ
ಸೂಪರ್ ಎಕ್ಸ್‌ಕ್ಲೂಸಿವ್	: ಮಧ್ಯಾಹ್ನ 2.57 ಕ್ಕೆ
ದಿಗ್ವಿಜಯ ನ್ಯೂಸ್ (LIVE)	: ಮಧ್ಯಾಹ್ನ 3.57 ಕ್ಕೆ
ದಿಗ್ವಿಜಯ ಸ್ಪೆಷಲ್ (LIVE)	: ಮಧ್ಯಾಹ್ನ 4.57 ಕ್ಕೆ
ಮೂರನೇ ಕಣ್ಣು	: ಸಂಜೆ 5.27 ಕ್ಕೆ
ಸಿನಿ STAR	: ಸಂಜೆ 6.27 ಕ್ಕೆ
ದಿ ಮೇಜರ್ ಸ್ಟೋರಿ	: ಸಂಜೆ 6.57 ಕ್ಕೆ
ರೆಡ್ ಅಲರ್ಟ್	: ರಾತ್ರಿ 7.27 ಕ್ಕೆ
D FOCUS	: ರಾತ್ರಿ 7.57 ಕ್ಕೆ
ನ್ಯೂಸ್ OUTLOOK	: ರಾತ್ರಿ 8.27 ಕ್ಕೆ
INSIDE ಸ್ಟೋರಿ	: ರಾತ್ರಿ 9.27 ಕ್ಕೆ
BIG ಬೆಂಗಳೂರು	: ರಾತ್ರಿ 9.57 ಕ್ಕೆ
ದಿ SPECIAL	: ರಾತ್ರಿ 10.27 ಕ್ಕೆ
DAY ROUND UP	: ರಾತ್ರಿ 10.57 ಕ್ಕೆ

*ಕೊನೆ ಕ್ಷಣದ ಬದಲಾವಣೆ ಹೊರತಾಗಿ
ಪ್ರಸಾರದ ಸಮಸ್ಯೆಗಳಿಗೆ ಸಂಪರ್ಕಿಸಿ:
76249 65333 / 88844 32303 / 080-22537345
VRL MEDIA PVT LTD

ಯೂನಿಯನ್ ಬ್ಯಾಂಕ್ Union Bank of India

ಇ-ಹರಾಜು ಮಾರಾಟ ನೋಟಿಸ್

ಇ-ಹರಾಜು ಮೂಲಕ ಸ್ಥಿರಾಸ್ತಿಗಳ ಮಾರಾಟ ನೋಟಿಸ್

ಬ್ಯಾಂಕಿಗೆ ಅಡಮಾನವಿಟ್ಟ ಸ್ಥಿರಾಸ್ತಿಗಳನ್ನು ಸರಫೇಸಿ ಕಾಯ್ದೆ, 2002ರ ಅಡಿ ಮಾರಾಟ ಮಾಡುವುದು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಿಂದ ಸಾಲ ಸೌಲಭ್ಯ ಪಡೆದುಕೊಂಡಿರುವ ಈ ಕೆಳಕಂಡ ಸಾಲಗಾರರು ಸಾಲ ಮರುಪಾವತಿಸುವಲ್ಲಿ ವಿಫಲರಾಗಿ ಸುಸ್ತಿದಾರರಾಗಿದ್ದಾರೆ. ಕೆಳಗೆ ನಮೂದಿಸಿದ ಸಾಲ ಬಾಕಿ ಮೊತ್ತ ಹಾಗೂ ಮುಂದಿನ ಸ್ವಾತ್ತ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚ ಬ್ಯಾಂಕಿಗೆ ಬರಬೇಕಿದೆ. ನಿರ್ದಿಷ್ಟವಾಗಿ ಸಾಲಗಾರರಿಗೆ / ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಇವರಿಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಇದರ ಅಧಿಕೃತ ಅಧಿಕಾರಿಯವರು ಭೌತಿಕವಾಗಿ ಸ್ವಾಧೀನ ಪಡಿಸಿಕೊಂಡಿದ್ದು ಅವುಗಳನ್ನು "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಮತ್ಯಾವುದಾದರೂ ಅಲ್ಲಿ ಇದ್ದಲ್ಲಿ" ಆಧಾರದ ಮೇಲೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ಬರಬೇಕಾದ ಕೆಳಗೆ ವಿವರಿಸಿರುವ ಬಾಕಿ ಮೊತ್ತ ವಸೂಲಿಗಾಗಿ ದಿನಾಂಕ 20-01-2022ರಂದು ಮಾರಾಟ ಮಾಡಲಾಗುವುದು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸೂಪರ್ ಮಾರ್ಕೆಟ್, ಕಲಬುರಗಿ

ಸಾಲಗಾರರ ಹೆಸರು ಮತ್ತು ವಿಳಾಸ: 1) ಮೆ: [illegible] ಎಂಟರ್‌ಪ್ರೈಸಸ್, ಮಾಲೀಕರು: ದಿ. [illegible] ಶೇಕ್ ಯೂಸುಫ್ (ದಿ. ಮಾಲೀಕರ ಕಾನೂನು ವಾರಸುದಾರರು) (ಎ) ರಹಮತುನ್ನಿಸಾ ಬೇಗಂ, ಗಂಡ: ಶೇಕ್ ಯೂಸುಫ್, (ಬಿ) ಶೇಕ್ ನಾಸಿರುದ್ದೀನ, ತಂದೆ: ಶೇಕ್ ಯೂಸುಫ್, (ಸಿ) ಶೇಕ್ ಮೊಹಿಯುದ್ದೀನ, ತಂದೆ: ಶೇಕ್ ಯೂಸುಫ್, (ಡಿ) ಸಬಿಹುನ್ನಿಸಾ ಬೇಗಂ, ತಂದೆ: ಶೇಕ್ ಯೂಸುಫ್, (ಇ) ಅಂಜುಮನ ಫಾತಿಮಾ, ತಂದೆ: ಶೇಕ್ ಯೂಸುಫ್ (ಎ) ರಿಂದ (ಇ) ಇವರೆಲ್ಲರ ವಿಳಾಸ: ಪ್ಲಾಟ ನಂ. 5-792/13, ಯದುಲ್ಲಾ ಕಾಲೋನಿ, ಕಲಬುರಗಿ, ಕರ್ನಾಟಕ - 585104.

ಬಾಕಿ ಮೊತ್ತ: ದಿನಾಂಕ 30-09-2021ಕ್ಕೆ ಇದ್ದಂತೆ **ರೂ.50,94,000/-**

ಆಸ್ತಿಗಳ ವಿವರ: ಆಸ್ತಿ ನಂ. 1) ಕಲಬುರಗಿ - 585103, ಅರ್ಜಾಪಾಡಸೂರ, ಸರ್ವೇ ನಂ. 18/1, ಪ್ಲಾಟ ನಂ. 28 & 29, ಪಿಪಿ ನಂ. 53 ರಲ್ಲಿಯ ಭೂಮಿಯ ವಿಸ್ತೀರ್ಣ 2400 ಚ. ಅಡಿ ಮತ್ತು ಅದರಲ್ಲಿರುವ ವಸತಿಯುತ ಕಟ್ಟಡದ ವಿಸ್ತೀರ್ಣ 1351 ಚ. ಅಡಿ ಮತ್ತು ಇದರ ಚಕ್ಕಬಂದಿ **ಪೂರ್ವ:** ಪ್ಲಾಟ ನಂ. 27, **ಪಶ್ಚಿಮ:** ಪ್ಲಾಟ ನಂ. 30, **ಉತ್ತರ:** ಪ್ಲಾಟ ನಂ. 35 ಮತ್ತು 34, **ದಕ್ಷಿಣ:** 30 ಅಡಿ ಅಗಲದ ರಸ್ತೆ

ಮೀಸಲು ಬೆಲೆ: ರೂ. 37.00 ಲಕ್ಷ, ಇಎಂಡಿ: ರೂ. 3.70 ಲಕ್ಷ ಖಾತಾ ನಂ: 510101004588575 ಐಎಫ್‌ಎಸ್‌ಸಿ ಕೋಡ್: UBIN0905940

ಆಸ್ತಿ ನಂ. 2) ಕಲಬುರಗಿ - 585103, ಅರ್ಜಾಪಾಡಸೂರ, ಸರ್ವೇ ನಂ. 18/1, ಪ್ಲಾಟ ನಂ. 34 & 35, ಪಿಪಿ ನಂ. 53 ರಲ್ಲಿಯ ಭೂಮಿಯ ವಿಸ್ತೀರ್ಣ 2400 ಚ. ಅಡಿ ಮತ್ತು ಇದರ ಚಕ್ಕಬಂದಿ **ಪೂರ್ವ:** ಪ್ಲಾಟ ನಂ. 36, **ಪಶ್ಚಿಮ:** ಪ್ಲಾಟ ನಂ. 33, **ಉತ್ತರ:** 30 ಅಡಿ ಅಗಲದ ರಸ್ತೆ, **ದಕ್ಷಿಣ:** ಪ್ಲಾಟ ನಂ. 29 ಮತ್ತು 28.

ಮೀಸಲು ಬೆಲೆ: ರೂ. 20.43 ಲಕ್ಷ, ಇಎಂಡಿ: ರೂ. 2.04 ಲಕ್ಷ ಖಾತಾ ನಂ: 510101004588575 ಐಎಫ್‌ಎಸ್‌ಸಿ ಕೋಡ್: UBIN0905940

ಇ-ಹರಾಜು ಸರ್ವೀಸ್ ಪ್ರೊವೈಡರ್ ಮತ್ತು ವೆಬ್‌ಸೈಟ್, ಸಹಾಯವಾಣಿ	www.mstcecommerce.com Email : ibapifin@mstcecommerce.com		
ಇ-ಹರಾಜು ದಿನಾಂಕ ಮತ್ತು ವೇಳೆ	20-01-2022, ಮಧ್ಯಾಹ್ನ 12.00 ಗಂಟೆಗೆ (ಪ್ರತಿ ಬಿಡ್‌ಗೆ 10 ನಿಮಿಷಗಳ ಅಪರಿಮಿತ ವಿಸ್ತರಣೆಯೊಂದಿಗೆ ಬಿಡ್ಡ ಮುಗಿಯುವರೆಗೆ)		
ಬಿಡ್ ಹೆಚ್ಚಿಸುವ ಮೊತ್ತ	1% ಮೊತ್ತದ ಮೇಲಿಂದ	ಇಎಂಡಿ ಸಹಿತ ಆನ್‌ಲೈನ್ ಬಿಡ್ ಅರ್ಜಿ ಸಲ್ಲಿಸಲು	07-01-2022 ರಿಂದ
ಆಸ್ತಿಯ ವೀಕ್ಷಣೆ	07-01-2022ರಿಂದ 19-01-2022 ವರೆಗೆ		
ಇಎಂಡಿ ಸಹಿತ ಬಿಡ್ ಅರ್ಜಿ ಸಲ್ಲಿಸುವ ಕೊನೆಯ ದಿನ ಮತ್ತು ಸಮಯ	19-01-2022 ಸಂಜೆ 4.00 ಗಂಟೆವರೆಗೆ		

ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳಿಗೆ ನೀಡಿರುವ ಲಿಂಕ್ http://www.unionbankofindia.co.in ನಲ್ಲಿ ಮತ್ತು ಇ-ಹರಾಜಿನ ಸರ್ವೀಸ್ ಪ್ರೊವೈಡರ್ ವೆಬ್ ಸೈಟ್ ಅಂದರೆ https://www.mstcecommerce.com/auctionhome/ibapi/index.jsp ವೀಕ್ಷಿಸುವುದು.

ದಿನಾಂಕ : 06-01-2022
ಸ್ಥಳ : ಕಲಬುರಗಿ

ಸಹಿ/- ಅಧಿಕೃತ ಅಧಿಕಾರಿ
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ಪ್ರಾಥಮಿಕ ಶಿಕ್ಷಕರ ಸಂಘಕ್ಕೆ ಆಯ್ಕೆ

ಕಲಬುರಗಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಆಳಂದ ತಾಲೂಕು ಅಧ್ಯಕ್ಷರಾಗಿ ನರಸಪ್ಪ ಬಿರಾದಾರ ದೇಗಾಂವ ಆಯ್ಕೆಯಾಗಿದ್ದಾರೆ. ಜಿಲ್ಲಾ ವೀರಶೈವ-ಲಿಂಗಾಯತ ನೌಕರರ ಸಂಘದಿಂದ ನಗರದಲ್ಲಿ ಗುರುವಾರ ನರಸಪ್ಪ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಜಿಲ್ಲಾಧ್ಯಕ್ಷ ದೇವೇಂದ್ರಪ್ಪ ಗಣಮುಖಿ, ಪ್ರಮುಖರಾದ ಅಣ್ಣಾರಾಯ ಮಂಗಾಣೆ, ಎಚ್.ಬಿ.ಪಾಟೀಲ್, ರಾಜಶೇಖರ ಮರಡಿ, ಬಸಯ್ಯ ಸ್ವಾಮಿ ಹೊದಲೂರ, ರಾಜಕುಮಾರ ಬಟಗೇರಿ, ಶರಣಬಸಪ್ಪ ಮಾಲಿಬಿರಾದಾರ, ರಾಜೇಂದ್ರ ಮರಿಗೌಡರ್, ಸತೀಶ ಸಜ್ಜನ, ಬಸವಣ್ಣಪ್ಪ ಸೀರಿ ಇದ್ದರು.

ಭ್ರಷ್ಟಾಚಾರ ತನಿಖೆಗೆ ಆದೇಶ

ಬೀದರ್: ಮಹಿಳಾ ಮತ್ತು ಮಕ್ಕಳ ಇಲಾಖೆ ಪ್ರಭಾರಿ ಉಪ ನಿರ್ದೇಶಕರಾಗಿ ಈ ಹಿಂದೆ ಕಾರ್ಯನಿರ್ವಹಿಸಿದ ತಿಪ್ಪಣ್ಣ ಸಿರ್ಸಿಗಿ ಅವಧಿಯಲ್ಲಿ ನಡೆದ ಭ್ರಷ್ಟಾಚಾರ ಕುರಿತು ತನಿಖೆಗೆ ಸರ್ಕಾರ ಆದೇಶಿಸಿದೆ ಎಂದು ವಿಶ್ವಕ್ರಾಂತಿ ದಿವ್ಯಪೀಠ ಅಧ್ಯಕ್ಷ ಓಂಪ್ರಕಾಶ ರೊಟ್ಟೆ ತಿಳಿಸಿದ್ದಾರೆ.